














ಬರಹಗಾರರು: Edward Hughes
ಚಿತ್ರಲೇಖಕರು: Byron Unger; Lazarus

ಪದ್ಮಾ ಸೈಲೇಸ್: Padma Silas
ಅಳವಡಿಸುವವರು: Bob Davies; Tammy S.

60ರ 1ನೇ ಕಥೆ

**M1914.org**

**Bible for Children, PO Box 3, Winnipeg MB  R3C 2G1  Canada**

ಅನುಮತಿ: ಈ ಕಥೆಯನ್ನು ಉಪಯೋಗಿಸುವದಕ್ಕೆ ಮತ್ತು ಮುದ್ರಣಹಾಕುವದಕ್ಕೆ ನಿಮಗೆ ಅನುಮತಿ ಇರುವದು. ಆದರೆ, ಇದನ್ನು ನೀವು ಯಾವ ಕಾರಣಕ್ಕಾಗಿಯೂ ಮಾರಾಟಮಾಡಬಾರದು.




ದೇವರು ಸಮಸ್ತವನ್ನು ಉಂಟುಮಾಡಿದನು

ದೇವರ ವಾಕ್ಯವಾದ ಬೈಬಲ್‌ನಿಂದ ಆರಿಸಿದ ಕಥೆ

ಸಿಕ್ಕುವ ಭಾಗ

ಆದಿಕಾಂಡ 1 ಮತ್ತು 2 ಅಧ್ಯಾಯಗಳು

“ನಿನ್ನ ವಾಕ್ಯವಿವರಣೆಯಿಂದ ಜ್ಞಾನೋದಯವಾಗುವದು.”
ಕೀರ್ತನೆ 119:130

ನಾವು ಕೆಟ್ಟದಾದ ಕಾರ್ಯಗಳನ್ನು ಮಾಡಿದ್ದೇವೆಂದು ದೇವರು ತಿಳಿದಿರುವನು. ಈ ಕೆಟ್ಟ ಕಾರ್ಯಗಳನ್ನು ಆತನು ಪಾಪವೆಂದು ಕರೆಯುತ್ತಾನೆ. ಪಾಪದ ಶಿಕ್ಷೆಯು ಮರಣವಾಗಿದೆ.

ದೇವರು ನಮ್ಮನ್ನು ತುಂಬಾ ಪ್ರೀತಿಸುವದರಿಂದ ತನ್ನ ಮಗನಾದ ಯೇಸುಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿ ನಮ್ಮ ಪಾಪದ ಆ ಶಿಕ್ಷೆಯನ್ನು ಆತನು ತನ್ನ ಮೇಲೆ ಹೊತ್ತು ಕೊಂಡು ಶಿಲುಬೆಯ ಮೇಲೆ ಪ್ರಾಣಕೊಡುವಂತೆ ಮಾಡಿದನು. ಆತನು ಸತ್ತವರೊಳಗಿಂದ ಎದ್ದು ಪರಲೋಕಕ್ಕೆ ಏರಿಹೋಗಿದ್ದಾನೆ. ಯೇಸುಕ್ರಿಸ್ತನ ಮೂಲಕ ದೇವರು ನಮ್ಮ ಪಾಪಗಳನ್ನು ಕ್ಷಮಿಸುತ್ತಾನೆ.

ನೀನು ನಿನ್ನ ಪಾಪಗಳಿಂದ ದೇವರ ಕಡೆಗೆ ತಿರುಗುವದಾದರೆ ಆತನಿಗೆ ಹೀಗೆ ಹೇಳು; ಪ್ರೀತಿಯುಳ್ಳ ದೇವರೇ, ಯೇಸುಕ್ರಿಸ್ತನು ನನ್ನ ಪಾಪಕ್ಕಾಗಿ ಸತ್ತು, ತಿರುಗಿ ಎದ್ದು ಬಂದು ಜೀವಿಸುತ್ತಿದ್ದಾನೆ ಎಂದು ನಂಬುತ್ತೇನೆ. ನೀನು ನನ್ನ ಹೃದಯದೊಳಗೆ ಬಂದು ನನ್ನ ಪಾಪಗಳನ್ನು ಕ್ಷಮಿಸು. ಈ ಮೂಲಕ ನಾನು ಹೊಸ ಜೀವಿತವನ್ನು ಪಡೆದುಕೊಂಡು ನಿನ್ನೊಂದಿಗೆ ಸದಾ ಜೀವಿಸುವೆನು. ನಿನ್ನ ಮಗನಾಗಿ ನಿನಗಾಗಿ ಜೀವಿಸಲು ನನಗೆ ಸಹಾಯ ಮಾಡು. ಆಮೆನ್. ಯೋಹಾನ 3:16

ನೀನು ಪ್ರತಿ ದಿನವೂ ಬೈಬಲ್ ಓದು ಮತ್ತು ಪ್ರಾರ್ಥನೆಯಲ್ಲಿ ದೇವರೊಂದಿಗೆ ಮಾತಾಡು.

ಕನ್ನಡ Kannada







ಆಗ ಅವನು ಜೀವಿಸುವವನಾದನು. ದೇವರು ಅವನಿಗೆ ಆದಾಮನೆಂದು ಕರೆದನು, ಮತ್ತು ಅವನನ್ನು ಏದೇನ್ ಎಂಬ ಸುಂದರವಾದ ತೋಟದೊಳಗೆ ಇರಿಸಿದನು.
3
ದೇವರು ಆದಾಮನನ್ನು ಉಂಟುಮಾಡುವದಕ್ಕಿಂತ ಮುಂಚೆ ಲೋಕವನ್ನು ಸುಂದರವಾದ ವಸ್ತುಗಳನ್ನು, ಜೀವಿಗಳನ್ನು, ಉಂಟುಮಾಡಿದನು.
4
ಬೆಟ್ಟಗುಡ್ಡಗಳನ್ನು, ಹುಲ್ಲುಗಾವಲುಗಳನ್ನು, ಸುವಾಸನೆಯ ಹೂವುಗಳನ್ನು, ಎತ್ತರವಾದ ಮರಗಳನ್ನು, ಸುಂದರವಾದ ಪಕ್ಷಿಗಳನ್ನು, ಜೇನು ನೊಣಗಳನ್ನು, ಮೀನುಗಳನ್ನು ಹರಿದಾಡುವ ಕ್ರಿಮಿ ಕೀಟ ಇವೆಲ್ಲವನ್ನು ಹಂತ ಹಂತವಾಗಿ ಉಂಟು ಮಾಡಿದನು. ಹೌದು, ದೇವರು ಆಕಾಶ-ಭೂಮಿಗಳನ್ನು ಅವುಗಳಲ್ಲಿರುವ ಸಮಸ್ತವನ್ನು ಉಂಟು ಮಾಡಿದನು.
5
ಆದಿಯಲ್ಲಿ ಅಂದರೆ ದೇವರು ಯಾವದನ್ನೂ ಉಂಟು ಮಾಡುವದಕ್ಕಿಂತ ಮುಂಚೆ ದೇವರ ಹೊರತು ಯಾವದೂ ಅಸ್ಥಿತ್ವದಲ್ಲಿರಲಿಲ್ಲ. ಮನುಷ್ಯರು, ದೇಶಗಳು, ಸ್ಥಳಗಳು ಅಥವಾ ವಸ್ತುಗಳು, ಯಾವದೂ ಇರಲಿಲ್ಲ. ಬೆಳಕು ಇರಲಿಲ್ಲ.
6
ಕತ್ತಲು ಮಾತ್ರ ಇತ್ತು. ಸಮಯ ಕೂಡ ಇರದದರಿಂದ ಈ ಹೊತ್ತು ನಾಳೆ ಎಂಬವು ಇರಲಿಲ್ಲ. ದೇವರಿಗೆ ಆರಂಭವಿಲ್ಲದಿರುವದರಿಂದ ಆತನೊಬ್ಬನೇ ಇದ್ದನು. ನಂತರ ದೇವರು ಸೃಷ್ಟಿಸುವ ಕಾರ್ಯದಲ್ಲಿ ತೊಡಗಿದನು!
7
ಆದಿಯಲ್ಲಿ ಅಂದರೆ ಅನೇಕಾನೇಕ ವರ್ಷಗಳ ಹಿಂದೆ ದೇವರು ಆಕಾಶವನ್ನು ಭೂಮಿಯನ್ನು ಉಂಟುಮಾಡಿದನು.
8
ಭೂಮಿಯು ಕ್ರಮವಿಲ್ಲದ್ದು ಮತ್ತು ಬರಿದಾಗಿಯು ಇತ್ತು. ಆದಿಸಾಗರದ ಮೇಲೆ ಕತ್ತಲು ಮುಚ್ಚಿಕೊಂಡಿತ್ತು. ಆಗ ದೇವರು "ಬೆಳಕಾಗಲಿ" ಎಂದು ಹೇಳಿದನು.
9
ತಕ್ಷಣವೇ ಬೆಳಕು ಕಾಣಿಸಿಕೊಂಡಿತು. ದೇವರು ಬೆಳಕನ್ನು ಕತ್ತಲೆಯನ್ನು ಬೇರೆ ಬೇರೆ ಮಾಡಿ, ಬೆಳಕಿಗೆ ಹಗಲು ಎಂದು ಮತ್ತು ಕತ್ತಲೆಗೆ ರಾತ್ರಿ ಎಂದು ಕರೆದನು. ಹೀಗೆ ಸಾಯಂಕಾಲವೂ ಮುಂಜಾನೆಯೂ ಆಗಿ ಮೊದಲನೆಯ ದಿನವಾಯಿತು.
10
ಎರಡನೆಯ ದಿನ ದೇವರು ಆಕಾಶದ ಕೆಳಗೆ ಅಂದರೆ ಭೂಮಿಯ ಮೇಲೆ ನೀರುಗಳುಳ್ಳ ಸಾಗರಗಳು, ಸಮುದ್ರಗಳು ಮತ್ತು ಕೆರೆಗಳು ರೂಪಗೊಳ್ಳುವಂತೆ ಮಾಡಿದನು. ಹಾಗೆಯೇ ಒಣನೆಲವು ಕಾಣುವಂತೆ ಮಾಡಿದನು. ಸಾಯಂಕಾಲವೂ ಮುಂಜಾನೆಯೂ ಆಗಿ ಎರಡನೆಯ ದಿನವಾಯಿತು.
11
ನಂತರ ದೇವರು ಒಣನೆಲದಲ್ಲಿ ಹುಲ್ಲು, ಗಿಡ, ಮರ, ಪೊದೆಗಳು ಹುಟ್ಟುಕೊಳ್ಳಲಿ ಎಂದು ಹೇಳಿದನು. ದೇವರು ಹೇಳಿದಂತೆಯೇ ಎಲ್ಲವೂ ಕಾಣಿಸಿಕೊಂಡವು. ಸಾಯಂಕಾಲವೂ ಮುಂಜಾನೆಯೂ ಆಗಿ ಮೂರನೆಯ ದಿನವಾಯಿತು.
12
ನಂತರ ದೇವರು ಸೂರ್ಯನನ್ನು, ಚಂದ್ರನನ್ನು ಮತ್ತು ಲೆಕ್ಕವಿಲ್ಲದಷ್ಟು ನಕ್ಷತ್ರಗಳನ್ನು ಉಂಟು ಮಾಡಿದನು. ಸಾಯಂಕಾಲವೂ ಮುಂಜಾನೆಯೂ ಆಗಿ ನಾಲ್ಕನೆಯ ದಿನವಾಯಿತು.
13
ನೀರಿನಲ್ಲಿ ಚಲಿಸುವ ಜೀವಿಗಳನ್ನು ಮತ್ತು ಹಾರಾಡುವ ಪಕ್ಷಿಗಳನ್ನು ದೇವರು ಉಂಟು ಮಾಡಿದನು. ನೀರಿನಲ್ಲಿ, ಜೀವಿಸುವ ಎಲ್ಲಾ ಜೀವಿಗಳು ಉಂಟಾಗಲಿ ಎಂದು ದೇವರು ಹೇಳಿದ ಕೂಡಲೆ ದೊಡ್ಡ ಸಣ್ಣ ಮೀನುಗಳು, ಎಲ್ಲಾ ತರದ ಸಮುದ್ರ ಜೀವಿಗಳು ಉಂಟಾದವು. ನಂತರ ದೇವರು ಆಕಾಶದಲ್ಲಿ ಹಾರಾಡುವ ಎಲ್ಲಾ ತರದ ಪಕ್ಷಿಗಳನ್ನು, ಭೂಮಿಯ ಮೇಲೆ ಇರುವ ಪಕ್ಷಿಗಳನ್ನು ಉಂಟು ಮಾಡಿದನು. ಹೀಗೆ ಸಾಯಂಕಾಲವೂ ಮುಂಜಾನೆಯೂ ಆಗಿ ಐದನೆಯ ದಿನವಾಯಿತು.
14
ಸಮುದ್ರ ಜೀವಿಗಳು, ಹಾರಾಡುವ ಪಕ್ಷಿಗಳಷ್ಟೇ ಅಲ್ಲ, ದೇವರು ಆರನೆಯ ದಿನದಲ್ಲಿ ನೆಲದ ಮೇಲೆ ಚಲಿಸುವ ಎಲ್ಲಾ ತರವಾದ ಪ್ರಾಣಿಗಳನ್ನು ಉಂಟುಮಾಡಿದನು. ದೊಡ್ಡ ಗಾತ್ರದ ಆನೆಗಳು, ನೀರ್ಗುದುರೆಗಳು, ಸಣ್ಣಗಾತ್ರದ ಮೊಲಗಳು, ನರಿಗಳು, ನೋಡಲು ಅಂದವಾದ ಜಿಂಕೆಗಳು, ವಿಕಾರವೆನಿಸುವ ಮೊಸಳೆಗಳು, ಭೂಮಿಯ ಮೇಲೆ ಹರಿದಾಡುವ ಕ್ರಿಮಿ, ಕೀಟಗಳು, ಜಿರಾಫೆ, ನಾಯಿ, ಬೆಕ್ಕು ಈ ಎಲ್ಲಾ ಪ್ರಾಣಿಗಳನ್ನು ದೇವರು ಉಂಟುಮಾಡಿದನು. ಹೀಗೆ ಸಾಯಂಕಾಲವೂ ಮುಂಜಾನೆಯೂ ಆಗಿ ಆರನೆಯ ದಿನವಾಯಿತು.
15
ಆರನೆಯ ದಿನದಂದು ದೇವರು ಮತ್ತೊಂದು ಕಾರ್ಯವನ್ನು ಕೂಡ ಮಾಡಿದನು. ಅದು ವಿಶೇಷವಾದ ಕಾರ್ಯವಾಗಿತ್ತು. ಮನುಷ್ಯರಿಗಾಗಿ ಎಲ್ಲವೂ ಸಿದ್ಧವಾಗಿತ್ತು. ಕಾಯಿ, ಸೊಪ್ಪು, ಆಹಾರ ಧಾನ್ಯಗಳು, ಹಣ್ಣುಗಳು ಇದ್ದವು ಮತ್ತು ಪ್ರಾಣಿಗಳು ಅವನ ಸೇವೆಗಾಗಿ ಇದ್ದವು.
16
ಆಗ ದೇವರು, "ಮನುಷ್ಯನನ್ನು ನಮ್ಮ ಹೋಲಿಕೆಗೆ ಸರಿಯಾಗಿ ಉಂಟು ಮಾಡೋಣ. ಅವನು ಎಲ್ಲಾದರ ಮೇಲೆ ದೊರೆತನ ಮಾಡಲಿ" ಎಂದು ಹೇಳಿದನು. ಹೀಗೆ ದೇವರು ಮನುಷ್ಯನನ್ನು ತನ್ನ ಸ್ವರೂಪದಲ್ಲಿ ತನ್ನ ಹೊಲಿಕೆಗೆ ಸರಿಯಾಗಿ ಉಂಟು ಮಾಡಿದನು.
17
ದೇವರು ಆದಾಮನೊಂದಿಗೆ ಮಾತಾಡಿ ಅವನಿಗೆ ಈ ಅಪ್ಪಣೆಯನ್ನು ಕೊಟ್ಟನು. "ತೋಟದಲ್ಲಿರುವ ಎಲ್ಲಾ ಮರಗಳ ಹಣ್ಣುಗಳನ್ನು ತಿನ್ನಬಹುದು; ಆದರೆ ತೋಟದ ಮಧ್ಯದಲ್ಲಿರುವ ಮರದ ಹಣ್ಣನ್ನು ಮಾತ್ರ ತಿನ್ನಲೇ ಬಾರದು, ತಿಂದ ದಿನವೇ ಸತ್ತು ಹೋಗುವಿ" ಎಂದು ದೇವರು ಆದಾಮನಿಗೆ ಹೇಳಿದನು.
18